## ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 1637/2022

ಪ್ರಾಸಾ–1, ಚಾಸಾ–1

ಸಾಕ್ಷಿದಾರರ ಹೆಸರು : ಮೋಹಿತ ಸಹದೇವ್

ತಂದೆಯ ಹೆಸರು : ಲೇಟ್ ಪಿ. ಶಿವಗೇಗೌಡ

ವಯಸ್ಸು : 44 ವರ್ಷ

ಉದ್ಯೋಗ : ಪೊಲೀಸ್ ಇನ್ಸ್ ಪೆಕ್ಟರ್ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ, ಮೈಸೂರು

ವಾಸ : ಮೈಸೂರು

ಸಾಕ್ಷಿಗೆ ದಿನಾಂಕಃ 17.01.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿಃ 15.07.2020 ರಿಂದ ದಿಃ 13.07.2021ರವರೆಗೆ ಚಾಮರಾಜನಗರ ಸಿ.ಇ.ಎನ್. ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11.02.2021ರಂದು ಬೆಃ 9.00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ದೂರವಾಣಿ ಮುಖಾಂತರ ಬಾತ್ಮಿದಾರರಿಂದ ಬಂದ ಮಾಹಿತಿ ಏನೆಂದರೆ, ಕೊತ್ತಲವಾಡಿ ಗ್ರಾಮದ ಅಜಯ್ ಬಿನ್ ಗುರುಸ್ವಾಮಪ್ಪ ರವರು ಟೈಲರಿಂಗ್ ಅಂಗಡಿಯಲ್ಲಿ ಮದ್ಯದ ಪೌಚ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ನಾನು ಮತ್ತು ಸಿಬ್ಬಂದಿಗಳಾದ ಚಾಸಾ–4 ರಿಂದ 7ರವರು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಶಿವಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಹೋಗಿ ಪಂಚರಾದ ಚಾಸಾ–2 ಮತ್ತು 3ರವರಿಗೆ ಪಂಚರಾಗಬೇಕೆಂದು ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸಲು ನೋಟಿಸನ್ನು ಕೊಟ್ಟಿದ್ದು, ನಂತರ ಕೊತ್ತಲವಾಡಿ ಗ್ರಾಮಕ್ಕೆ ಹೋಗಿ ಅಲ್ಲಿ ನೀರಿನ ತೊಂಬೆಯ ಬಳಿ ಜೀಪನ್ನು ನಿಲ್ಲಿಸಿ ಮರೆಮಾಚಿ ಅಜಯ್ ರವರ ಟೈಲರಿಂಗ್ ಅಂಗಡಿ ಹತ್ತಿರ ಹೋದಾಗ ಒಬ್ಬ ಆಸಾಮಿ ಟೈಲರಿಂಗ್ ಕೆಲಸ ಮಾಡುತ್ತಿದ್ದು, ಆತನ ಹೆಸರು ವಿಳಾಸ ಕೇಳಲಾಗಿ ಅಜಯ್ @ ಅಜಯ್ ಕುಮಾರ್ ಬಿನ್ ಗುರುಸ್ವಾಮಪ್ಪ, 36 ವರ್ಷ, ಟೈಲರಿಂಗ್ ಕೆಲಸ, ಕೊತ್ತಲವಾಡಿ ಎಂದು ತಿಳಿಸಿದನು. ಸದರಿ ಅಂಗಡಿಯ ಬಾಗಿಲಿನ ಬಲಭಾಗದ ಬಳಿ ರಟ್ಟಿನ ಬಾಕ್ಸ್ ಗಳಿರುವುದು ಕಂಡುಬಂದಿತ್ತು. ರಟ್ಟಿನ ಬಾಕ್ಸ್ ನ್ನು ಆತನ ಕೈಯಿಂದಲೇ ಬಿಚ್ಚಿಸಿ

ನೋಡಿದಾಗ ಮದ್ಯದ ಪೌಚ್‌ಗಳಿರುವುದು ಕಂಡುಬಂದಿತ್ತು. ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 90 ಎಂ.ಎಲ್. ನ 46 ಟೆಟ್ರಾ ಪ್ಯಾಕ್ ಗಳಿದ್ದು, ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 90 ಎಂ.ಎಲ್. ನ 18 ಪೌಚ್ ಗಳಿರುವುದು ಕಂಡುಬಂದಿತ್ತು. ಮದ್ಯದ ಪೌಚ್‌ಗಳನ್ನು ಇಟ್ಟುಕೊಂಡು ಮಾರಾಟ ಮಾಡಲು ಯಾವುದಾದರೂ ರಹದಾರಿ ಇದೇಯೇ ಎಂದು ಕೇಳಿದಾಗ ತನ್ನ ಬಳಿ ಇಲ್ಲ ಎಂದು ಹೇಳಿದ್ದು, ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 20 ಪೌಚ್ ಗಳನ್ನು ಮತ್ತು ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 10 ಪೌಚ್ ಗಳನ್ನು ಮಾದರಿಗಾಗಿ ತೆಗೆದು ಒಂದು ಬಿಳಿ ಬಟ್ಟೆ ಚೀಲಕ್ಕೆ ಹಾಕಿ "H" ಎಂಬ ಅಕ್ಷರದಿಂದ ಸೀಲು ಮಾಡಿ ದಾರದಿಂದ ಕಟ್ಟಿ ಚಾಸಾ-2 ಮತ್ತು 3ರವರ ಸಹಿ ಪಡೆದು ಆ ಚೀಟಿಯನ್ನು ಬಿಳಿ ಬಟ್ಟೆ ಚೀಲಕ್ಕೆ ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ಬರೆಯಲಾಯಿತು. ಅದನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಮಾಲಿನೊಂದಿಗೆ ಚಾಸಾ-11ರವರ ಮುಂದೆ ಒಪ್ಪಿಸಿದೆ. ವರದಿಯನ್ನು ನೋಡಿ ಗುರುತಿಸಿದ್ದು, ಆ ವರದಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತೇನೆ. 30 ಪೌಚ್‌ಗಳನ್ನು ಒಟ್ಟಾಗಿ ಮು.ಮಾ-1 ಎಂದು ಗುರುತಿಸಲಾಯಿತು. ರಟ್ಟಿನ ಬಾಕ್ಸ್ ನ್ನು ಮು.ಮಾ-2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಅವರೇ ಅಜಯ್ ಕುಮಾರ್.

**ಪಾಟೀಸವಾಲುಃ ಶ್ರೀ ಎನ್.ವಿ. ವಕೀಲರಿಂದಃ**

ಚಾಸಾ-2 ಮತ್ತು 3ರವರಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಅಂಗಡಿಯ ಅಸೆಸ್ ಮೆಂಟ್ ಸಂಖ್ಯೆಯನ್ನಾಗಲೀ ಅಥವಾ ಅಂಗಡಿ ಸಂಖ್ಯೆಯನ್ನಾಗಲೀ ನಿಪಿ-1ರಲ್ಲಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ಕೊತ್ತಲವಾಡಿ ಗ್ರಾಮ ದೊಡ್ಡ ಗ್ರಾಮ ಎನ್ನುವುದು ನಿಜ. ಅಂಗಡಿ ಯಾವ ಬೀದಿಯಲ್ಲಿದೆ ಎನ್ನುವುದನ್ನು ನಿಪಿ-1ರಲ್ಲಿ ಬರೆದಿಲ್ಲ. ಅಂಗಡಿಯ ಅಕ್ಕಪಕ್ಕದವರನ್ನು ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ

ತೊಂದರೆ ಇರಲಿಲ್ಲ. ಮು.ಮಾ-1ರ ಮೇಲೆ ಬ್ಯಾಚ್ ಸಂಖ್ಯೆಯನ್ನಾಗಲೀ ಕ್ರಮ ಸಂಖ್ಯೆಯಾಗಲೀ ನಮೂದಿಸಲೂ ಯಾವುದೇ ತೊಂದರೆ ಇರಲಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿಪಿ-1ನ್ನು ಬರೆಯಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಂಗಡಿಯಲ್ಲಿ ಮದ್ಯೆ.ತುಂಬಿದ ರಟ್ಟಿನ ಬಾಕ್ಸ್ ಗಳು ಸಿಕ್ಕಿದ್ದು ಸುಳ್ಳು ಎಂದರೆ ಸರಿಯಲ್ಲ. ರಟ್ಟಿನ ಬಾಕ್ಸ್ ನ ವಿವರಣೆ ಬರೆಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2ನ್ನು ವಶಪಡಿಸಿಕೊಂಡಿದ್ದು ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಪಂಚರ ಸಾಕ್ಷಿಗಳನ್ನು ಕರೆದುಕೊಂಡು ಹೋಗಿಲ್ಲ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಪ್ರಥಮವಾಗಿ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಸುಳ್ಳು ಪ್ರಕರಣ ನಮೂದಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.